Date : 25.11.2025

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**– ಮುಂದುವರಿದ ಮುಖ್ಯ ವಿಚಾರಣೆ – ಅರ್ಜಿದಾರರ ಪರ ಶ್ರೀ ಬಿ.ಎನ್.ಟಿ. ವಕೀಲರಿಂದ –**

ನಾನು ಈ ಕೇಸಿನಲ್ಲಿ ಅರ್ಜಿದಾರನಿದ್ದು, ನನ್ನ ಮುಖ್ಯವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸರಿ ಇರುತ್ತವೆ.

ನನ್ನ ಸಾಕ್ಷಿಗೆ ಬೆಂಬಲಿತವಾಗಿ, ದಿಃ 21.06.2021 ರಂದು 1 ನೇ ಎದುರುದಾರರು ನನಗೆ ನೀಡಿದ 2 ಅವಾರ್ಡ ನೋಟೀಸ್ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–1 ಮತ್ತು 2 ಎಂದು, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ ಒಂದು ಪಹಣಿ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ–3 ಎಂದು, ದಿಃ 03.10.2021 ರಂದು ಚಿತ್ರದುರ್ಗ ಜಿಲ್ಲಾಧಿಕಾರಿಗಳು ನನಗೆ ನೀಡಿದ ಒಂದು ಹಿಂಬರಹ ಹಾಜರುಪಡಿಸಿದ್ದು, ಅದನ್ನು ನಿಪಿ–4 ಎಂದು, ದಿಃ 08.10.2021 ರಂದು ಚಿತ್ರದುರ್ಗ ಜಿಲ್ಲೆಯ ಹೊಸ ರೈಲ್ವೇ ಮಾರ್ಗ ಯೋಜನೆಯ ವಿಶೇಷ ಭೂಸ್ವಾಧೀನಾಧಿಕಾರಿ ಹೊರಡಿಸಿದ ಸಾಮಾನ್ಯ ಐತೀರ್ಪಿನ ನಕಲು ದೃಢೀಕೃತ ಪ್ರತಿ ಮತ್ತು ಅವಾರ್ಡ ತಃಖ್ತೆಯ ನಕಲು ದೃಢೀಕೃತ ಪ್ರತಿ ಹಾಗೂ ದಿಃ 20.09.2017 ರಂದು ಪಾಲವ್ವನಹಳ್ಳಿ ಗ್ರಾಮದ ಒಂದು ಆಸ್ತಿಯ ಬಗ್ಗೆ ಆದ ನೊಂದಣಿ ಕ್ರಯಪತ್ರದ ನಕಲು ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–5 ರಿಂದ 7 ಎಂದು, ಅರ್ಜಿಯಲ್ಲಿ ಕಾಣಿಸಿದ ಆಸ್ತಿಯ ಬಗ್ಗೆ ಇರುವ 4 ಪಹಣಿ ಪ್ರತಿ ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–8 ರಿಂದ 11 ಎಂದು ಗುರುತಿಸಲಾಯಿತು.

ಮೇಲಿನ ನನ್ನ ಸಾಕ್ಷಿಯನ್ನು ಪರಿಗಣಿಸಿ ಅರ್ಜಿಯಲ್ಲಿ ಕೋರಿದಂತೆ ಎದುರುದಾರರ ವಿರುದ್ಧ ಆದೇಶ ಮಾಡಲು ಕೋರುತ್ತೇನೆ.

**– ಪಾಟೀ ಸವಾಲು – ಎದುರುದಾರ 1 ಮತ್ತು 2 ರವರ ಪರ ಶ್ರೀಜಿ.ಎಸ್.ಎ. ಮತ್ತು ಡಿ.ಜಿ.ಪಿ. ವಕೀಲರಿಂದ –**

(**ಎದುರುದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು, ನ್ಯಾಯಯುತ ದೃಷ್ಟಿಯಿಂದ ಕಾಲಾವಕಾಶ ನೀಡಿ ಪಾಟೀ ಸವಾಲು ಮುಂದೂಡಲಾಯಿತು**).

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

*ಓದಿ ಹೇಳಿ ಕೇಳಿ ಸರಿ ಇದೆ.*

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.